

بسم اللهِ الرّحمٰن الرّحيم

# ಪ್ರವಾದಿ[ಸ]ರ ಜೀವನ ಚರಿತ್ರೆ: ಆರಂಭಿಕ ದಂಡಯಾತ್ರೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **09-06-2023** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ- بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಿಜ್ರತಿನ ನಂತರದ ಆರಂಭಿಕ ಸ್ಥಿತಿಗತಿಗಳು, ಬದ್ರ್ ಯುದ್ಧದ ಕಾರಣಗಳು, ಮಕ್ಕಾದ ಸತ್ಯನಿಷೇಧಿಗಳ ಕೃತ್ಯಗಳನ್ನು ಮತ್ತು ಯೋಜನೆಗಳನ್ನು ತಡೆಯಲಿಕ್ಕಾಗಿ ಹಝ್ರತ್ ಪೈಗಂಬರ್[ಸ] ಮಾಡಿದ ಕಾರ್ಯಾಚರಣೆಗಳ ಕುರಿತು ಸ್ವಲ್ಪ ಪ್ರಸ್ತಾಪಿಸಲಾಗಿತ್ತು. ಬದ್ರ್ ಯುದ್ಧಕ್ಕೆ ಸ್ವಲ್ಪ ಮುಂಚಿನ ಕೆಲವು ದಂಡಯಾತ್ರೆಗಳ, ಯುದ್ಧಗಳ ಹಾಗೂ ಮಕ್ಕದ ಸತ್ಯನಿಷೇಧಿಗಳು ಯುದ್ಧಕ್ಕಾಗಿ ಮಾಡಿದ ಸಿದ್ಧತೆಗಳ ಸ್ಥಿತಿಯನ್ನು ಕೂಡ ಹೇಳುವೆನು. ಇನ್‌ಶಾ ಅಲ್ಲಾಹ್.

ಒಂದನೇ ಹಿಜರೀ ರಮಝಾನ್ ತಿಂಗಳಲ್ಲಿ ಹಝ್ರತ್ ಪೈಗಂಬರ್[ಸ] ಮೊದಲ ಯುದ್ಧ ಕಾರ್ಯಾಚರಣೆಗಾಗಿ ತನ್ನ ದೊಡ್ಡಪ್ಪರಾದ ಹಝ್ರತ್ ಹಂಝ಼ ಬಿನ್ ಅಬ್ದುಲ್‌ಮುತ್ತಲಿಬ್[ರ]ರನ್ನು ಅಮೀರನ್ನಾಗಿ ಮಾಡಿಕೊಂಡು ಕಳುಹಿಸಿದರು. ಇದನ್ನು ಸೀಫುಲ್ ಬಹ್ರ್ ಎಂದೂ ಕರೆಯಲಾಗುತ್ತದೆ. ಅದರ ಧ್ವಜ ಬಿಳಿಯಾಗಿತ್ತು. ಅದನ್ನು ಹಝ್ರತ್ ಅಬೂ ಮರ್ಸದ್[ರ] ಎತ್ತಿಕೊಂಡಿದ್ದರು. ಅವರ ಜೊತೆಗೆ 30 ಮುಹಾಜಿರ್ ಸವಾರರು ಇದ್ದರು. ಈಸ್ ಪ್ರದೇಶದಲ್ಲಿ ಅಬೂಜಹಲಿನ ನೇತೃತ್ವದಲ್ಲಿ ಬರುತಿದ್ದ ಒಂದು ಸಂಘದೊಂದಿಗೆ ಅವರ ಮುಖಾಮುಖಿಯಾಯಿತು. ಎರಡು ಪಕ್ಷದವರೂ ಯುದ್ಧಕ್ಕಾಗಿ ಸಾಲಾಗಿ ನಿಂತುಕೊಂಡರು. ಆದರೆ ಬನೂ ಸುಲೈಮ್ ಗೋತ್ರದ ಒಬ್ಬ ಸರದಾರ ಹೇಗಾದರೂ ಯುದ್ಧ ನಡೆಯುವುದನ್ನು ತಡೆದು ನಿಲ್ಲಿಸಿದರು. ಹೀಗೆ ಎರಡು ಪಕ್ಷದವರೂ ಮರಳಿ ಹೋದರು.

ಮುಂದಿನದು ಸರಿಯ ಉಬೈದ ಬಿನ್ ಹಾರಿಸ್ ಆಗಿದೆ. ಒಂದನೇ ಹಿಜರಿ, ಶವ್ವಾಲ್ ತಿಂಗಳಲ್ಲಿ ಹಝ್ರತ್ ಪೈಗಂಬರ್[ಸ] ಹಝ್ರತ್ ಉಬೈದ ಬಿನ್ ಹಾರಿಸ್[ರ]ರನ್ನು 60 ಮುಹಾಜಿರರ ಸೇನಾಧಿಪತಿಯನ್ನಾಗಿ ಮಾಡಿಕೊಂಡು ಸನಿಯತುಲ್ ಮರ್‌ರಾದ ಕಡೆಗೆ ಕಳುಹಿಸಿದರು. ಅಲ್ಲಿ ಅಬೂಸುಫ್ಯಾನ್ ಮತ್ತು ಇನ್ನೂರು ಸವಾರರರೊಂದಿಗೆ ಅವರ ಮುಖಾಮುಖಿಯಾಯಿತು. ಎರಡು ಕಡೆಯಿಂದಲೂ ಕೆಲವು ಬಾಣಗಳನ್ನು ಚಲಾಯಿಸಲಾದುವು. ಆದರೆ ಯುದ್ಧ ನಡೆಯಲಿಲ್ಲ. ಇದಕ್ಕೆ ಮುಂಚೆ ಮುಸ್ಲಿಮರ ಮತ್ತು ಮುಶ್ರಿಕರ ನಡುವೆ ಬಾಣಗಳನ್ನು ಚಲಾಯಿಸಲಾಗಿರಲಿಲ್ಲ. ಮುಸ್ಲಿಮರ ಕಡೆಯಿಂದ ಹಝ್ರತ್ ಸಅದ್ ಬಿನ್ ವಖಾಸ್[ರ] ಮೊದಲ ಬಾಣವನ್ನು ಚಲಾಯಿಸಿದರು. ಅದು ಇಸ್ಲಾಮಿನ ಚರಿತ್ರೆಯಲ್ಲಿ ಚಲಾಯಿಸಲಾದ ಮೊದಲ ಬಾಣವಾಗಿತ್ತು. ಅದರ ಹೆಗ್ಗಳಿಕೆ ಹಝ್ರತ್ ಸಅದ್[ರ]ರಿಗೆ ಲಭಿಸಿತು. ಅನಂತರ ಎರಡು ಪಕ್ಷದವರೂ ಮರಳಿ ತಮ್ಮ ತಮ್ಮ ಪ್ರದೇಶಗಳಿಗೆ ಮರಳಿ ಹೋದರು.

ಮುಂದಿನದು ಸರಿಯ ಸಅದ್ ಬಿನ್ ಅಬೀ ವಖಾಸ್. ಈ ದಂಡಯಾತ್ರೆ ಹಿಜರೀ ಒಂದು ಅಥವಾ ಎರಡರಲ್ಲಿ ನಡೆದಿತ್ತು. ಹಝ್ರತ್ ಪೈಗಂಬರ್[ಸ] ಖುರೈಶಿನ ಒಂದು ವ್ಯಾಪಾರಿ ಸಂಘವನ್ನು ತಡೆಯಲಿಕ್ಕಾಗಿ ಹಝ್ರತ್ ಸಅದ್ ಬಿನ್ ಅಬೀ ವಖಾಸ್[ರ]ರನ್ನು 20 ಜನರ ಅಮೀರನ್ನಾಗಿ ಮಾಡಿಕೊಂಡು ಕಳುಹಿಸಿದರು ಮತ್ತು ಖರಾರ್ ಕಣಿವೆಗಿಂತ ಮುಂದಕ್ಕೆ ಹೋಗಬೇಡಿರಿ ಎಂದು ಅವರಿಗೆ ಆಜ್ಞೆ ನೀಡಿದರು. ಆದರೆ ಅವರು ಖರಾರಿಗೆ ತಲಪುವ ಒಂದು ದಿನ ಮೊದಲೇ ಆ ವ್ಯಾಪಾರಿ ತಂಡ ಅಲ್ಲಿಂದ ಹೊರಟು ಹೋಗಿತ್ತು. ಹೀಗೆ ಯಾವುದೇ ಕದನ ನಡೆಯದೇ ಅವರು ಮರಳಿಬಂದರು.

ಮುಂದಿನದು ವದ್ದಾನ್ ಯುದ್ಧ. ಇದು ಹಿಜರಿ ಎರಡು ಸಫರ್ ತಿಂಗಳದ್ದಾಗಿದೆ. ಹಝ್ರತ್ ಪೈಗಂಬರ್[ಸ] 60 ಅಥವಾ 70 ಮುಹಾಜಿರರ ಸಮೇತ ವದ್ದಾನಿನ ಕಡೆಗೆ ಹೋದರು. ಚರಿತ್ರೆಗಾರ ಇಬ್ನು ಸಅದ್‌ರ ಪ್ರಕಾರ ಇದು ಹಝ್ರತ್ ಪೈಗಂಬರ್[ಸ] ಸ್ವತಃ ಭಾಗವಹಿಸಿದ ಮೊದಲ ಯುದ್ಧವಾಗಿತ್ತು. ಹಝ್ರತ್ ಪೈಗಂಬರ್[ಸ] ಹಝ್ರತ್ ಸಅದ್ ಬಿನ್ ಉಬಾದರನ್ನು ಮದೀನದಲ್ಲಿ ತನ್ನ ಪ್ರತಿನಿಧಿಯನ್ನಾಗಿ ಮಾಡಿದರು. ಹಝ್ರತ್ ಪೈಗಂಬರ್[ಸ]ರ ಉದ್ದೇಶ ಖುರೈಶಿನ ವ್ಯಾಪಾರ ತಂಡವನ್ನು ತಡೆಯುವುದಾಗಿತ್ತು. ಆದರೆ ಅಲ್ಲಿಗೆ ಹಝ್ರತ್ ಪೈಗಂಬರ್[ಸ] ತಲುಪುವುದಕ್ಕೆ ಮುಂಚಿತವಾಗಿಯೇ ಅದು ಹೊರಟು ಹೋಗಿತ್ತು. ಅಲ್ಲಿ ಹಝ್ರತ್ ಪೈಗಂಬರ್[ಸ] ಬನೂ ಝಮ್‌ರದ ಮುಖಂಡ ಮಗ್‌ಶೀ ಬಿನ್ ಅಮ್ರ್ ಝಮ್‌ರಿಯ ಜೊತೆಗೆ ಸಂಧಾನದ ಒಪ್ಪಂದ ಮಾಡಿಕೊಂಡರು. ಅದರ ಪ್ರಕಾರ ಎರಡೂ ಪಕ್ಷದವರು ಪರಸ್ಪರ ದಾಳಿ ನಡೆಸಬಾರದು ಮತ್ತು ಶತ್ರುಗಳಿಗೆ ಸಹಾಯ ಮಾಡಬಾರದು. ಈ ಯಾತ್ರೆಯಲ್ಲಿ ಹಝ್ರತ್ ಪೈಗಂಬರ್[ಸ] 15 ದಿನಗಳು ಮದೀನದಿಂದ ಹೊರಗೆ ಇದ್ದರು.

ಬವಾತ್ ಯುದ್ಧವು ಎರಡನೇ ಹಿಜರಿ ರಬೀಉಲ್ ಅವ್ವಲ್ ತಿಂಗಳಲ್ಲಿ ನಡೆಯಿತು. ಹಝ್ರತ್ ಪೈಗಂಬರ್[ಸ]

ಹಝ್ರತ್ ಸಅದ್ ಬಿನ್ ಮುಆಧ್[ರ]ರನ್ನು ಮದೀನದ ಅಮೀರನ್ನಾಗಿ ನೇಮಿಸಿ ತನ್ನ ಇಬ್ಬರು ಸಹಾಬಿಯರ ಜೊತೆಗೆ ಖುರೈಶಿನ ವ್ಯಾಪಾರಿ ತಂಡವನ್ನು ತಡೆಯಲಿಕ್ಕಾಗಿ ಹೊರಟರು. ಆ ವ್ಯಾಪಾರಿ ತಂಡದಲ್ಲಿ ಉಮಯ್ಯ ಬಿನ್ ಖಲ್ಫ್ ಅಲ್ಲದೇ ನೂರು ಖುರೈಶಿಗಳು ಇದ್ದರು ಮತ್ತು 2500 ಒಂಟೆಗಳು ಇದ್ದುವು. ಬವಾತಿಗೆ ತಲುಪಿದಾಗ ಅಲ್ಲಿ ಅವರಿಗೆ ಯಾರನ್ನೂ ಎದುರಿಸಬೇಕಾಗಿ ಬರಲಿಲ್ಲ ಮತ್ತು ಹಝ್ರತ್ ಪೈಗಂಬರ್[ಸ] ಮದೀನಕ್ಕೆ ಮರಳಿದರು. ಈ ಯುದ್ಧದಲ್ಲಿ ಧ್ವಜದ ಬಣ್ಣ ಬಿಳಿಯಾಗಿತ್ತು. ಅದನ್ನು ಸಅದ್ ಬಿನ್ ಅಬೀ ವಖಾಸ್[ರ] ಎತ್ತಿಕೊಂಡಿದ್ದರು.

ಉಶೈರ ಯುದ್ಧ: ಖುರೈಶಿನ ಒಂದು ವ್ಯಾಪಾರಿ ತಂಡ ಮಕ್ಕದಿಂದ ಹೊರಟಿದೆ ಮತ್ತು ಮಕ್ಕದವರು ಈ ವ್ಯಾಪಾರಿ ತಂಡಕ್ಕಾಗಿ ತಮ್ಮ ಎಲ್ಲ ಸಂಪತ್ತನ್ನು ಬಂಡವಾಳವಾಗಿ ಹಾಕಿರುವರು ಎಂದು ಹಝ್ರತ್ ಪೈಗಂಬರ್[ಸ]ರಿಗೆ ಮಾಹಿತಿ ಲಭಿಸಿತು. ಅದರಲ್ಲಿ ಲಭಿಸುವ ಲಾಭವನ್ನು ಮುಸ್ಲಿಮರ ವಿರುದ್ಧ ಯುದ್ಧ ಮಾಡಲು ಉಪಯೋಗಿಸಲಿಕ್ಕಾಗಿ ಅವರು ಹೀಗೆ ಮಾಡಿದ್ದರು. ಹೀಗೆ ಹಝ್ರತ್ ಪೈಗಂಬರ್[ಸ] ಹಿಜರಿ 2 ಜಮಾದಿಲ್ ಊಲ ಅಥವಾ ಜಮಾದಿಲ್ ಸಾನಿಯದಲ್ಲಿ 150 ಅಥವಾ 200 ಜನರೊಂದಿಗೆ ಯಾತ್ರೆ ಹೊರಟರು. ಅವರು ಉಶೈರಗೆ ತಲುಪಿದಾಗ ಖುರೈಶಿನ ವ್ಯಾಪಾರಿ ತಂಡ ಕೆಲವು ದಿನಗಳ ಹಿಂದೆಯೇ ಅಲ್ಲಿಂದ ಹೊರಟು ಹೋಗಿದೆ ಎಂದು ತಿಳಿದುಬಂತು. ಅಲ್ಲಿ ಹಝ್ರತ್ ಪೈಗಂಬರ್[ಸ] ಕೆಲವು ದಿನಗಳು ತಂಗಿದರು. ಬನೂ ಮದ್‌ಲಜ್ ಮತ್ತು ಬನೂ ಝುಮ್‌ರದ ಮಿತ್ರ ಪಕ್ಷಗಳೊಂದಿಗೆ ಮೈತ್ರಿ ಸಂಧಾನ ಮಾಡಿಕೊಂಡರು ಮತ್ತು ಮದೀನಕ್ಕೆ ಮರಳಿ ಹೋದರು. ಮಕ್ಕದ ಖುರೈಶಿಗಳ ಇದೇ ವ್ಯಾಪಾರಿ ತಂಡವು ಸಿರಿಯದಿಂದ ಮರಳಿ ಬರುವಾಗ ಹಝ್ರತ್ ಪೈಗಂಬರ್[ಸ] ಪುನಃ ಅದನ್ನು ಹಿಂಬಾಲಿಸಿದರು. ಹೀಗೆ ಬದ್ರ್ ಯುದ್ಧ ನಡೆಯಲು ಕಾರಣವಾಯಿತು.

ಬದ್ರುಲ್‌ಊಲ ಯುದ್ಧ: ಹಝ್ರತ್ ಪೈಗಂಬರ್[ಸ] ಉಶೈರ ಯುದ್ಧದಿಂದ ಮದೀನಕ್ಕೆ ಮರಳಿ ಬಂದು ಹತ್ತು ದಿನಗಳು ಕೂಡ ಕಳೆದಿರಲಿಲ್ಲ ಅಷ್ಟರಲ್ಲಿ ಕುರ್‌ಝ್ ಬಿನ್ ಜಾಬಿರ್ ಎಂಬಾತ ಮದೀನದ ಹೊಲಗಳ ಮೇಲೆ ದಾಳಿ ನಡೆಸಿದನು. ಹಝ್ರತ್ ಪೈಗಂಬರ್[ಸ] ಅವನನ್ನು ಹಿಂಬಾಲಿಸಲು ಹೊರಟರು ಮತ್ತು ಹಝ್ರತ್ ಝೈದ್ ಬಿನ್ ಹಾರಿಸ[ರ]ರನ್ನು ತನ್ನ ಪ್ರತಿನಿಧಿಯನ್ನಾಗಿ ಮಾಡಿದರು. ಹಝ್ರತ್ ಪೈಗಂಬರ್[ಸ] ಸಫ್‌ವಾನ್ ಕಣಿವೆಗೆ ತಲುಪಿದರು. ಆದರೆ ಕುರ್‌ಝ್ ಬಿನ್ ಜಾಬಿರ್ ಬೇಗನೇ ಮುಂದಕ್ಕೆ ಹೋಗಿದ್ದ ಕಾರಣ ಆತನನ್ನು ಹಿಡಿಗೂಡಲಾಗಲಿಲ್ಲ. ಆದ್ದರಿಂದ ಹಝ್ರತ್ ಪೈಗಂಬರ್[ಸ] ಮದೀನಕ್ಕೆ ಮರಳಿದರು. ಇದನ್ನು ಬದ್ರುಲ್‌ಊಲ ಎಂದು ಕರೆಯಲ್ಪಡಲು ಕಾರಣವೇನೆಂದರೆ, ಬದ್ರ್ ಮೈದಾನಿನ ಹತ್ತಿರದ ಸಫ್‌ವಾನ್ ಎಂಬ ಸ್ಥಳದ ತನಕ ಮುಸ್ಲಿಮರ ಸೈನ್ಯ ತಲುಪಿತ್ತು.

ಕುರ್‌ಝ್ ಬಿನ್ ಜಾಬಿರ್‌ನ ಕುರಿತು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್[ರ] ವಿಶದವಾಗಿ ಬರೆದಿರುವರು. ಕುರ್‌ಝ್ ಬಿನ್ ಜಾಬಿರಿನ ಈ ದಾಳಿ ಸಾಧಾರಣ ಗ್ರಾಮೀಣ ರೀತಿಯ ದಾಳಿಯಾಗಿರಲಿಲ್ಲ. ಬದಲಾಗಿ ಆತ ನಿಶ್ಚಿತವಾಗಿಯೂ ಖುರೈಶಿನ ಕಡೆಯಿಂದ ಮುಸ್ಲಿಮರ ವಿರುದ್ಧ ವಿಶೇಷವಾದ ಉದ್ದೇಶದಿಂದ ಬಂದಿದ್ದನು. ವಿಶೇಷವಾಗಿ ಹಝ್ರತ್ ಪೈಗಂಬರ್[ಸ]ರನ್ನು ವಧಿಸುವ ಉದ್ದೇಶ ಅವನಿಗೆ ಇರಬಹುದಾದ ಸಾಧ್ಯತೆಯೂ ಇದೆ. ಆದರೆ ಮುಸ್ಲಿಮರು ಜಾಗ್ರತರಾಗಿ ಇರುವುದನ್ನು ಕಂಡು ಅವನು ಕೇವಲ ಅವರ ಒಂಟೆಗಳನ್ನು ಕೊಳ್ಳೆಹೊಡೆದು ಹೊರಟುಹೋದನು. ಮದೀನದ ಮೇಲೆ ಮತ್ತೆ ಮತ್ತೆ ದಾಳಿ ನಡೆಸಿಕೊಂಡು ಮುಸ್ಲಿಮರನ್ನು ಬಡೆದು ನಾಶ ಮಾಡಬೇಕೆಂದು ಮಕ್ಕದ ಖುರೈಶಿಗಳು ನಿರ್ಧಾರ ಮಾಡಿದ್ದರು ಎಂದು ಇದರಿಂದ ತಿಳಿದುಬರುತ್ತದೆ. ನೆನಪಿಡಬೇಕಾದ ಮತ್ತೊಂದು ಸಂಗತಿಯೇನೆಂದರೆ, ಇದಕ್ಕಿಂತ ಮೊದಲೇ ಮುಸ್ಲಿಮರಿಗೆ ಖಡ್ಗದೊಂದಿಗೆ ಜಿಹಾದ್ ನಡೆಸಲು ಅನುಮತಿ ಲಭಿಸಿತ್ತು ಮತ್ತು ಅವರು ಸ್ವಯಂ ರಕ್ಷಣೆಯ ಉದ್ದೇಶದಿಂದ ಅದರ ಕುರಿತು ಆರಂಭಿಕ ಕಾರ್ಯಾಚರಣೆಗಳನ್ನು ಶುರುಮಾಡಿದ್ದರು. ಆದರೆ ಮುಸ್ಲಿಮರ ಕಡೆಯಿಂದ ಸತ್ಯನಿಷೇಧಿಗಳಿಗೆ ಯಾವುದೇ ವಿಧದ ಸಂಪತ್ತು ಅಥವಾ ಜೀವದ ನಷ್ಟ ಉಂಟಾಗಿರಲಿಲ್ಲ. ಆದರೆ ಕುರ್‌ಝ್ ಬಿನ್ ಜಾಬಿರಿನ ದಾಳಿಯಿಂದ ಮುಸ್ಲಿಮರಿಗೆ ನಷ್ಟವುಂಟಾಯಿತು. ಹೀಗೆ ಮುಸ್ಲಿಮರು ಖುರೈಶಿಗಳ ಸವಾಲು ಸ್ವೀಕಾರ ಮಾಡಿದ ನಂತರವೂ ಯುದ್ಧ ಮಾಡುವುದರಲ್ಲಿ ಸತ್ಯನಿಷೇಧಿಗಳೇ ಮೊದಲು ಮಾಡಿದರು.

ಮುಂದಿನದು ಸರಿಯ ಅಬ್ದುಲ್ಲಾಹ್ ಬಿನ್ ಜಹಶ್: ಮಕ್ಕದ ಸಮೀಪ ನಖ್‌ಲ ಕಣಿವೆಯಲ್ಲಿ ಈ ದಂಡಯಾತ್ರೆ ನಡೆಯಿತು. ಹಝ್ರತ್ ಪೈಗಂಬರ್[ಸ] ರಜಬ್ ತಿಂಗಳಲ್ಲಿ ಹಝ್ರತ್ ಅಬ್ದುಲ್ಲಾಹ್ ಬಿನ್ ಜಹಶ್‌ರನ್ನು 8 ಮುಹಾಜಿರರ ಜೊತೆಗೆ ಕಳುಹಿಸಿದರು. ಮಾರ್ಗದಲ್ಲಿ ಹಝ್ರತ್ ಸಅದ್ ಬಿನ್ ಅಬೀ ವಖಾಸ್[ರ] ಮತ್ತು ಹಝ್ರತ್ ಉತ್ಬ ಬಿನ್ ಗ಼ಝ್‌ವಾನ್[ರ]ರ ಒಂಟೆಗಳು ಕಾಣೆಯಾದುವು. ಅವುಗಳನ್ನು ಹುಡುಕಲು ಹೋದ ಕಾರಣದಿಂದ ಅವರು ಹಿಂದೆ ಉಳಿದರು. ಉಳಿದವರೆಲ್ಲರೂ ನಖ್‌ಲಗೆ ತಲುಪಿದರು. ಅಲ್ಲಿ ಖುರೈಶಿಗಳು ಮುಸ್ಲಿಮರನ್ನು ನೋಡಿದಾಗ ಭಯಗೊಂಡರು. ಅದು ಪರಿಶುದ್ಧ ರಜಬ್ ತಿಂಗಳ ಕೊನೆಯ ದಿನವಾಗಿತ್ತು. ಅವರನ್ನು ಸುಮ್ಮನೆ ಬಿಟ್ಟರೆ ಕೈಯಿಂದ ತಪ್ಪಿ ಹೋಗುವರು ಎಂದು ಮುಸ್ಲಿಮರು ಪರಸ್ಪರ ಹೇಳಿದರು. ಆದ್ದರಿಂದ ಖುರೈಶಿಗಳ ಮೇಲೆ ದಾಳಿ ನಡೆಸಲಾಯಿತು ಮತ್ತು ಅವರ ಒಬ್ಬ ಮುಖಂಡನಾದ ಅಮ್ರ್ ಬಿನ್ ಹಝ್ರಮಿಯನ್ನು ವಧಿಸಿದರು. ಒಂಟೆಗಳು ಮತ್ತು ಇಬ್ಬರು ಕೈದಿಗಳ ಜೊತೆಗೆ ಹಝ್ರತ್ ಅಬ್ದುಲ್ಲಾಹ್ ಬಿನ್ ಜಹಶ್[ರ] ಮದೀನದಲ್ಲಿ ಹಝ್ರತ್ ಪೈಗಂಬರ್[ಸ]ರ ಬಳಿ

ಹಾಜರಾದರು. ಪರಿಶುದ್ಧ ತಿಂಗಳಲ್ಲಿ ಯುದ್ಧ ಮಾಡಲು ನಾನು ನಿಮಗೆ ಆದೇಶ ನೀಡಿರಲಿಲ್ಲ ಎಂದು ಹೇಳಿ ಹಝ್ರತ್ ಪೈಗಂಬರ್(ಸ) ಯಾವುದೇ ವಸ್ತುವನ್ನು ಸ್ವೀಕಾರ ಮಾಡಲಿಲ್ಲ. ಪರಿಶುದ್ಧ ತಿಂಗಳಲ್ಲಿ ಈ ದಾಳಿಯನ್ನು ಮುಸ್ಲಿಮರು ಮಾಡಿದ ನಂತರ, ಅವರನ್ನು ಸಮಾಧಾನಪಡಿಸಲು ಅಲ್ಲಾಹನು ಸೂರಃ ಬಖರಃದ 218ನೇ ವಚನವನ್ನು ಅವತೀರ್ಣಗೊಳಿಸಿದನು.

ಈ ದಿವ್ಯವಾಣಿಯಿಂದ ಮುಸ್ಲಿಮರಿಗೆ ಸಮಾಧಾನವಾಯಿತು ಮತ್ತು ಖುರೈಶಿಗಳ ಆವೇಶ ಸಹ ಸ್ವಲ್ಪ ತಣ್ಣಗಾಯಿತು. ಏಕೆಂದರೆ, ಇದರ ಕುರಿತು ದಿವ್ಯವಾಣಿ ಅವತೀರ್ಣವಾಗಿದೆ ಎಂದು ಅವರಿಗೆ ಗೊತ್ತಾಯಿತು. ಅನಂತರ ಸಅದ್ ಬಿನ್ ಅಬೀ ವಖಾಸ್(ರ) ಮತ್ತು ಉತ್ಬ ಬಿನ್ ಗ಼ಝ್ವಾನ್(ರ) ಸುರಕ್ಷಿತವಾಗಿ ಮರಳಿ ಬಂದಾಗ ಹಝ್ರತ್ ಪೈಗಂಬರ್(ಸ) ಪರಿಹಾರ ಧನವನ್ನು ಪಡೆದುಕೊಂಡು ಖುರೈಶಿನ ಇಬ್ಬರು ಕೈದಿಗಳನ್ನು ಬಿಡುಗಡೆಗೊಳಿಸಿದರು.

**ಬದ್ರುಲ್ ಕುಬ್ರ** ಯುದ್ಧವನ್ನು ಪವಿತ್ರ ಖುರ್‌ಆನ್ **ಯೌಮುಲ್ ಫುರ್ಖಾನ್** ಎಂದು ಹೇಳಿದೆ. ಹಝ್ರತ್ ಖ಼ಲೀಫತುಲ್ ಮಸೀಹ್ ಅವ್ವಲ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಫುರ್ಖಾನ್ (ಸತ್ಯ ಮತ್ತು ಅಸತ್ಯವನ್ನು ಬೇರ್ಪಡಿಸಿ ತೋರಿಸುವ ದಿನ) ಬದ್ರ್ ಯುದ್ಧದ ದಿನದಂದು ಆಗಿತ್ತು. ಆ ದಿನದಂದು ವಿರೋಧಿಗಳ ಶಕ್ತಿಶಾಲಿ ಮುಖಂಡರು ನಾಶವಾದರು ಹಾಗೂ ಮುಸ್ಲಿಮರಿಗೆ ವಿಜಯ ಮತ್ತು ಮೇಲುಗೈ ಲಭಿಸಿತು. ಫುರ್ಖಾನ್ ಪದದ ಅರ್ಥವನ್ನು ಹಝ್ರತ್ ಖ಼ಲೀಫತುಲ್ ಮಸೀಹ್ ಅವ್ವಲ್(ರ) ಮತ್ತೊಂದೆಡೆ ಹೀಗೆ ಹೇಳುತ್ತಾರೆ: ಪವಿತ್ರ ಖುರ್‌ಆನಿನಿಂದ ನನಗೆ ತಿಳಿದುಬಂದ ಅರ್ಥವೇನೆಂದರೆ, ಶತ್ರುಗಳ ಸೊಂಟ ಮುರಿದು ಹೋಗುವಂತಹ ವಿಜಯವನ್ನು ಫುರ್ಖಾನ್ ಎಂದು ಹೇಳಲಾಗುತ್ತದೆ. ಅದು ಬದ್ರಿನ ದಿನವಾಗಿತ್ತು.

ಈ ಯುದ್ಧವನ್ನು ಬದ್ರ್ ಸಾನಿಯ, ಬದ್ರುಲ್ ಕುಬ್ರ, ಬದ್ರುಲ್ ಉಝ್ಮ ಮತ್ತು ಬದ್ರುಲ್ ಖಿತಾಲ್ ಎಂದೂ ಕರೆಯಲಾಗುತ್ತದೆ. ಖುರೈಶಿನ ಒಂದು ವ್ಯಾಪಾರ ತಂಡದೊಂದಿಗೆ ಅಬೂಸುಫ್‌ಯಾನ್ ಮರಳಿ ಬರುತ್ತಿದ್ದಾನೆ ಎಂಬ ಮಾಹಿತಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿತು. ಅದರಲ್ಲಿ ಒಂದು ಸಾವಿರ ಒಂಟೆಗಳು ಮತ್ತು ಖುರೈಶಿಗಳ ಬಹಳ ದೊಡ್ಡ ಬಂಡವಾಳವಿತ್ತು ಹಾಗೂ 30, 40 ಅಥವಾ 70 ಜನರಿದ್ದರು. ಹಝ್ರತ್ ಪೈಗಂಬರ್(ಸ) ಮೊದಲೊಮ್ಮೆ ಬೆನ್ನಟ್ಟಿದ ತಂಡ ಅದೇ ಆಗಿತ್ತು. ಈ ಯುದ್ಧ ಕಾರ್ಯಾಚರಣೆಗಾಗಿ ಹಝ್ರತ್ ಪೈಗಂಬರ್(ಸ) ಹಿಜ್ರಿ 2, ಜಮಾದಿಲ್ ಊಲ ಅಥವಾ ಜಮಾದಿಲ್ ಆಖಿ಼ರ್ ತಿಂಗಳಲ್ಲಿ ಹೊರಟರು. ಮುಸ್ಲಿಮರು ಲೂಟಿ ಮಾಡಲಿಕ್ಕಾಗಿ ಈ ಯುದ್ಧವನ್ನು ಮಾಡಿದ್ದರು ಎಂದು ಕೆಲವು ತಿಳಿಗೇಡಿಗಳು ಆಕ್ಷೇಪಿಸುತ್ತಾರೆ. ಆದರೆ ಹಝ್ರತ್ ಬಶೀರ್ ಅಹ್ಮದ್ ಸಾಹಿಬ್(ರ) ಸೀರತ್ ಖ಼ಾತಮುನ್ನಬಿಯ್ಯೀನ್‌ನಲ್ಲಿ ಹೇಳುತ್ತಾರೆ: ಆ ವ್ಯಾಪಾರಿ ತಂಡವನ್ನು ತಡೆಯಲಿಕ್ಕಾಗಿ ಹೊರಟದ್ದು ಖಂಡಿತವಾಗಿಯೂ ಆಕ್ಷೇಪಾರ್ಹವಲ್ಲ. ಏಕೆಂದರೆ ಅದು ಅಸಾಧಾರಣವಾದ ಸಂಘವಾಗಿತ್ತು. ಅದರಿಂದ ಲಭಿಸುವ ಲಾಭವನ್ನು ಮುಸ್ಲಿಮರ ವಿರುದ್ಧ ಉಪಯೋಗಿಸಲು ಅವರು ನಿರ್ಧರಿಸಿದ್ದರು. ಅದರಿಂದ ಲಭಿಸಿದ ಲಾಭವನ್ನು ಉಹದ್ ಯುದ್ಧದ ತಯಾರಿಗಾಗಿಯೂ ಖರ್ಚು ಮಾಡಲಾಗಿತ್ತು ಎಂದು ಚರಿತ್ರೆಯಿಂದ ಸಾಬೀತಾಗುತ್ತಿದೆ. ಆದ್ದರಿಂದ ಅದನ್ನು ತಡೆಗಟ್ಟುವುದು ಯುದ್ಧ ತಂತ್ರದ ಅಗತ್ಯವಾದ ಭಾಗವಾಗಿತ್ತು.

ಹಝ್ರತ್ ಪೈಗಂಬರ್(ಸ) ಈ ವ್ಯಾಪಾರ ತಂಡದ ಬಗ್ಗೆ ಮಾಹಿತಿ ಪಡೆಯಲಿಕ್ಕಾಗಿ ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್(ರ) ಮತ್ತು ಹಝ್ರತ್ ಸಈದ್ ಬಿನ್ ಝೈದ್(ರ)ರನ್ನು ಕಳುಹಿಸಿದರು. ಹಝ್ರತ್ ಪೈಗಂಬರ್(ಸ) ತನ್ನ ಸಹಾಬಿಯರೊಂದಿಗೆ ಆ ವ್ಯಾಪಾರ ತಂಡದ ಮೇಲೆ ದಾಳಿ ನಡೆಸಲಿಕ್ಕಾಗಿ ಹೊರಟಿರುವರು ಎಂದು ಅಬೂಸುಫ್‌ಯಾನಿಗೆ ಸುದ್ದಿ ಮುಟ್ಟಿತು. ಈ ವಾರ್ತೆಯನ್ನು ಕೇಳಿ ಅವರು ತುಂಬಾ ಗಾಬರಿಗೊಂಡರು ಮತ್ತು ಮಕ್ಕಾಗೆ ಹೋಗಿ ಈ ಸುದ್ದಿಯನ್ನು ತಲುಪಿಸಲು ಒಬ್ಬ ದೂತನೊಡನೆ ಹೇಳಿದರು. ಸ್ವತಃ ಅಬೂಸುಫ್‌ಯಾನ್ ಬದ್ರ್ ಮೈದಾನವನ್ನು ಬಿಟ್ಟುಕೊಂಡು ವೇಗವಾಗಿ ಮುಂದಕ್ಕೆ ಹೋದರು.

ಈ ಕುರಿತು ಹಝ್ರತ್ ಪೈಗಂಬರ್(ಸ)ರ ದೊಡ್ಡಮ್ಮರಾದ ಆತಿಕ ಬಿನ್ತ್ ಅಬ್ದುಲ್ ಮುತಲ್ಲಿಬ್‌ರ ವಿಸ್ಮಯಕರವಾದ ಒಂದು ಕನಸಿನ ಪ್ರಸ್ತಾಪವಿದೆ. ಅದು ನಂತರ ಕಾಲದಲ್ಲಿ ಸತ್ಯವಾಗಿ ಈಡೇರಿತು. ಅಬೂ ಸುಫ್‌ಯಾನನ ದೂತ ಮಕ್ಕಾಗೆ ತಲುಪುವುದಕ್ಕೆ ಮೂರು ರಾತ್ರಿಗಳಿಗೆ ಹಿಂದೆ ಅವರು ಹೀಗೆ ಕನಸನ್ನು ಕಂಡಿದ್ದರು: ಒಂಟೆಯ ಮೇಲೆ ಸವಾರನಾಗಿ ಒಬ್ಬ ವ್ಯಕ್ತಿ ಅಬ್‌ತಹ್‌ನ ಮೈದಾನದಲ್ಲಿ, ಅನಂತರ ಕಅ್‌ಬ ಭವನದ ಮೇಲೆ ಅನಂತರ ಅಬೂಖುಬೀಸ್ ಪರ್ವತ ಶಿಖರದಲ್ಲಿ ನಿಂತುಕೊಂಡು ಉಚ್ಚ ಸ್ವರದಲ್ಲಿ ಜನರೊಡನೆ ತಮ್ಮ ತಮ್ಮ ಮರಣಸ್ಥಳಗಳಿಗೆ ಮೂರು ದಿನಗಳೊಳಗೆ ತಲುಪಲು ಹೇಳುತ್ತಾನೆ. ಅನಂತರ ಅವನು ಒಂದು ಬಂಡೆಕಲ್ಲನ್ನು ಪರ್ವತದ ಮೇಲಿನಿಂದ ಕೆಳಗೆ ಉರುಳಿಸುತ್ತಾನೆ. ಆ ಕಲ್ಲು ಕೆಳಗೆ ತಲುಪಿದಾಗ ಚೂರುಚೂರಾಯಿತು. ಈ ಕಲ್ಲಿನ ಚೂರುಗಳು ಮಕ್ಕದ ಪ್ರತಿಯೊಂದು ಮನೆಯ ಮೇಲೆ ಬಿತ್ತು. ಅವರು ಈ ಸ್ವಪ್ನವನ್ನು ತನ್ನ ಸಹೋದರನಾದ ಹಝ್ರತ್ ಅಬ್ಬಾಸ್ ಬಿನ್ ಅಬ್ದುಲ್ ಮುತಲ್ಲಿಬ್(ರ)ರಿಗೆ ಹೇಳಿದರು. ಅನಂತರ ಅದು ಪ್ರಚಾರಗೊಳ್ಳುತ್ತಾ ಅಬೂಜಹಲಿನ ಕಿವಿಗೂ ಮುಟ್ಟಿತು. ಅಬೂಜಹಲ್ ಹೇಳಿದನು: ನಾವು ಮೂರು ದಿನಗಳಷ್ಟು ಕಾಲ ಕಾಯುತ್ತೇವೆ. ಕನಸಿನಲ್ಲಿ ಕಂಡ ಹಾಗೆಯೇ ಸಂಭವಿಸಿದರೆ ಸರಿ, ಇಲ್ಲದಿದ್ದರೆ “ನೀವು ಅರೇಬಿಯದಲ್ಲಿ ಅತ್ಯಂತ ದೊಡ್ಡ ಸುಳ್ಳುಗಾರರಾಗಿರುವಿರಿ” ಎಂದು ನಾವು ಕಅ್‌ಬದಲ್ಲಿ ಒಂದು ಲಿಖಿತವನ್ನು ತೂಗು ಹಾಕುವೆವು. ಅನಂತರ ಬನೂ ಅಬ್ದುಲ್ ಮುತಲ್ಲಿಬ್‌ರ ಮಹಿಳೆಯರು ಹೇಳಿದ ಪ್ರಕಾರ ಹಝ್ರತ್ ಅಬ್ಬಾಸ್(ರ) ಅಬೂಜಹಲನ್ನು ಹೊಡೆಯಲಿಕ್ಕಾಗಿ ಕಅ್‌ಬ

ಭವನಕ್ಕೆ ಹೋದರು. ಆದರೆ ಗಾಬರಿಗೊಂಡ ಸ್ಥಿತಿಯಲ್ಲಿದ್ದ ಅಬೂಸುಫ್‌ಯಾನಿನ ದೂತನ ಕಡೆಗೆ ಅವರ ಗಮನ ಹೋಯಿತು. ಮುಸ್ಲಿಮರ ದಾಳಿಯ ಬಗ್ಗೆ ಎಚ್ಚರಿಸಲಿಕ್ಕಾಗಿ ಆ ದೂತನನ್ನು ಅಬೂ ಸುಫ್‌ಯಾನ್ ಕಳುಹಿಸಿದ್ದನು. ಅಬು ಸುಫ್‌ಯಾನಿನ ವ್ಯಾಪಾರ ಸಂಘವನ್ನು ರಕ್ಷಿಸಬೇಕೆಂದು ಅವನು ಎಲ್ಲೆಡೆ ಘೋಷಣೆ ಕೂಗುತ್ತಿದ್ದನು. ಖುರೈಶಿಗಳು ಮೊದಲೇ ಯುದ್ಧ ಮಾಡಲು ನೆವನಗಳನ್ನು ಹುಡುಕುತ್ತಿದ್ದರು. ಈ ಘೋಷಣೆಯಿಂದ ಅವರಿಗೆ ಬೇಕಾದ ಕಾರಣಗಳು ಲಭಿಸಿದುವು ಮತ್ತು ಅವರು ಯುದ್ಧಕ್ಕಾಗಿ ಪೂರ್ಣವಾದ ತಯಾರಿಯನ್ನು ಮಾಡಲು ಆರಂಭಿಸಿದರು.

ಇದರ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّاٰتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِیَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاۗءِ ذِی الْقُرْبٰى
وَيَنْهٰى عَنِ الْفَحْشَاۗءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

*At, **'Masjid Mubarak',** Islamabad, Tilford, UK. On 09-06-2023*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**:* *khutuba.kannada@gmail.com*

**You can find all the Sermons archived at**: www.alislam.org/friday-sermon